VK
ವಿಜಯ ಕರ್ನಾಟಕ

02.03.2015

# ಎಪಿಎಂಸಿಯ ಆನ್‌ಲೈನ್‌ಗೆ ಕೇಂದ್ರ ಪ್ರಶಂಸೆ

**ವಿಕ ಸುದ್ದಿಲೋಕ** ಬೆಂಗಳೂರು

ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಿರುವ ಎಪಿಎಂಸಿ ಮಾರುಕಟ್ಟೆಯ ಆನ್‌ಲೈನ್ ಖರೀದಿ ಪದ್ಧತಿಯನ್ನು ಕೇಂದ್ರ ಸರಕಾರ ಕರ್ನಾಟಕ ಮಾಡೆಲ್ ಎಂದು ಬಣ್ಣಿಸಿದ್ದು, ರಾಷ್ಟ್ರಕ್ಕೆ ಮಾದರಿಯಾದ ಪದ್ಧತಿ ಎಂದು ಪ್ರಶಂಸಿಸಿದೆ.

ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಲಾದ 2014-15ನೇ ಸಾಲಿನ ಆರ್ಥಿಕ ಸಮೀಕ್ಷೆಯಲ್ಲಿ ಇದರ ಬಗ್ಗೆ ಉಲ್ಲೇಖಿಸಲಾಗಿದೆ. ಭಾರತ ಸರಕಾರ ಜಾರಿಗೆ ತಂದಿರುವ ಎಪಿಎಂಸಿ ಕಾಯಿದೆಯಲ್ಲಿನ ಅಂಶಗಳಾದ ಖಾಸಗಿ ಮಾರುಕಟ್ಟೆಗಳ ಸ್ಥಾಪನೆ, ನೇರ ಖರೀದಿ ಕೇಂದ್ರಗಳ ಸ್ಥಾಪನೆ, ಒಪ್ಪಂದ ಕೃಷಿ, ಇ-ವ್ಯಾಪಾರ, ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ ಮಾರುಕಟ್ಟೆಗಳ ಅಭಿವೃದ್ಧಿ, ಕೃಷಿ ಉತ್ಪನ್ನಗಳ ಗುಣ ವಿಶ್ಲೇಷಣೆ, ಪ್ರಮಾಣೀಕರಣ ಮಾಡಲು ಕರ್ನಾಟಕ ಕೈಗೊಂಡಿರುವ ಕ್ರಮಗಳನ್ನು ರೈತಾನುಕೂಲ ಯೋಜನೆ ಎಂದು ಸಮೀಕ್ಷೆಯಲ್ಲಿ ವಿವರಿಸಲಾಗಿದೆ

ಕೃಷಿ ಉತ್ಪನ್ನಗಳ ಮಾರುಕಟ್ಟೆಯಲ್ಲಿ ತೂಕ, ಬೆಲೆ ಪಟ್ಟಿ, ಮಾರುಕಟ್ಟೆ ಶುಲ್ಕ, ಲೆಕ್ಕಪತ್ರ ನಿರ್ವಹಣೆಗೆ ಕರ್ನಾಟಕ ಅಳವಡಿಸಿರುವ ವಿನೂತನ ತಂತ್ರಜ್ಞಾನವನ್ನು ಆರ್ಥಿಕ ಸಮೀಕ್ಷೆ ವಿಶೇಷವಾಗಿ ಪ್ರಸ್ತಾಪಿಸಿದೆ. ಉಗ್ರಾಣ ಆಧಾರಿತ ಉತ್ಪನ್ನಗಳ ಅಡಮಾನ ಸಾಲ, ಏಕೀಕೃತ ಲೈಸೆನ್ಸ್ ನೀಡಿಕೆಯಿಂದಾಗಿ ಮಾರುಕಟ್ಟೆಯಲ್ಲಿ ಖರೀದಿಗೆ ಉಂಟಾಗಿರುವ ಸ್ಪರ್ಧೆ, ರೈತರ ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಧಾರಣೆಯ ಲಭ್ಯತೆಯನ್ನು ವಿವರಿಸಿರುವ ಆರ್ಥಿಕ ಸಮೀಕ್ಷೆಯು, ಇತರೆ ರಾಜ್ಯಗಳ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಇದನ್ನು ಅಳವಡಿಸುವಂತೆ ಸಲಹೆ ನೀಡಲಾಗಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ರಾಷ್ಟ್ರೀಯ ಇ-ಮಾರುಕಟ್ಟೆ ಸೇವಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಹಕಾರ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಆರ್. ಮನೋಜ್, ''ರಾಜ್ಯದಲ್ಲಿ ಅನುಷ್ಠಾನಗೊಂಡಿರುವ ಏಕೀಕೃತ ಮಾರುಕಟ್ಟೆ ವಿಧಾನ ಮತ್ತು ತಂತ್ರಜ್ಞಾನವನ್ನು ಬೇರೆ ರಾಜ್ಯಗಳು ಅಳವಡಿಸಿಕೊಳ್ಳಲು ಉತ್ಸುಕವಾಗಿವೆ. ಕೇಂದ್ರ ಆರ್ಥಿಕ ಸಮೀಕ್ಷೆಯಲ್ಲಿ ಕರ್ನಾಟಕದ ಮಾದರಿ ಉಲ್ಲೇಖಿಸಿರುವುದು ಇನ್ನಷ್ಟು ಪ್ರೋತ್ಸಾಹ ದೊರೆತಂತಾಗಿದೆ,'' ಎಂದಿದ್ದಾರೆ.